# 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ

## ಎಸ್.ಸಿ.ನಂಃ 263/2023

# EVIDENCE RECORDED INCAMERA

ಚಾಸಾ-1, ಪ್ರಾಸಾ-1

| | | |
|---|---|---|
| ಸಾಕ್ಷಿದಾರರ ಹೆಸರು | : | ಯಶಸ್ವಿನಿ ಬಿ.ಎಂ. |
| ತಂದೆಯ ಹೆಸರು | : | ಮಂಜುನಾಥ್ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಚನ್ನರಾಯಪಟ್ಟಣ |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 07.01.2025.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ-2 ಹಾಗೂ 3 ನನ್ನ ಪೋಷಕರು. ಚಾಸಾ-4 ನನ್ನ ಸಂಬಂಧಿಕರು. ಚಾಸಾ-5 ರಿಂದ 7 ರವರ ಪರಿಚಯ ನನಗೆ ಇರುತ್ತದೆ. ಚಾಸಾ-8 ಹಾಗೂ 9 ರವರ ಪರಿಚಯ ನನಗೆ ಇರುವುದಿಲ್ಲ. ನಾವು ನಮ್ಮ ತಂದೆ ತಾಯಿಗೆ ಇಬ್ಬರು ಮಕ್ಕಳು. ನನಗೆ ಜೀವನ್ ಎಂಬ ಹೆಸರಿನ ತಮ್ಮನಿರುತ್ತಾನೆ. ನಾನು ಡಿಪ್ಲೋಮೋ (ನರ್ಸಿಂಗ್) ವ್ಯಾಸಂಗ ಮಾಡಿರುತ್ತೇನೆ. ನಾನು ಹಿಂದೆ ರಾಜೀವ್ ಆಸ್ಪತ್ರೆಯಲ್ಲಿ ಸಹಾಯಕ ನರ್ಸ್ ಆಗಿ ಕೆಲಸ ಮಾಡುತ್ತಿದ್ದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ನನಗೆ ಇರುವುದಿಲ್ಲ. 1ನೇ ಆರೋಪಿ ಜೀವನ್ ನನಗೆ ಯಾವತ್ತೂ ಫೋನ್ ಹಾಗೂ ಮೆಸೇಜ್ ಮಾಡುತ್ತಿರಲಿಲ್ಲ. ಮುಂದುವರೆದು 1ನೇ ಆರೋಪಿ ಯಾವತ್ತೂ ನನ್ನನ್ನು ಪ್ರೀತಿಸುತ್ತಿದ್ದೇನೆ ಹಾಗೂ ನನ್ನನ್ನೇ ಮದುವೆಯಾಗುತ್ತೇನೆ ಎಂದು ಹೇಳಿರುವುದಿಲ್ಲ.

2. 1ನೇ ಆರೋಪಿ ಯಾವತ್ತೂ ನನ್ನನ್ನು ಹಾಸನಕ್ಕೆ ಕರೆಸಿ, 2ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿಲ್ಲ. 1ನೇ ಆರೋಪಿಯು ಯಾವತ್ತೂ ನನ್ನ ಇಚ್ಛೆಗೆ ವಿರುದ್ಧವಾಗಿ 2ನೇ ಆರೋಪಿಯ ಮನೆಯಲ್ಲಿ ನನ್ನ ಜೊತೆ ದೈಹಿಕ ಸಂಪರ್ಕ ಮಾಡಿಲ್ಲ ಹಾಗೂ ಲೈಂಗಿಕವಾಗಿ ಅತ್ಯಾಚಾರ ಮಾಡಿಲ್ಲ. ಈ ಸಂಬಂಧ 1ನೇ ಆರೋಪಿಯು 2ನೇ ಆರೋಪಿತನ ಮೊಬೈಲ್ ನಲ್ಲಿ ಸದರಿ ಘಟನೆಯ ಬಗ್ಗೆ ಛಾಯಾಚಿತ್ರ ಹಾಗೂ ವೀಡಿಯೋ ಮಾಡಿದ್ದಾನೆ ಎಂಬುದರ ಬಗ್ಗೆ ನನಗೆ

ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ. 1ನೇ ಆರೋಪಿಯು ಈ ವಿಚಾರವಾಗಿ ನನಗೆ ಫೋನ್ ಮಾಡಿ ಹೆದರಿಸಿ ತನಗೆ 5,000/- ರೂ. ಹಣ ಕೊಡದಿದ್ದರೆ ಅಶ್ಲೀಲ ಫೋಟೋ ಹಾಗೂ ವೀಡಿಯೋಗಳನ್ನು ನನ್ನ ಸ್ನೇಹಿತರಿಗೆ ಕಳಿಸಿ ನಿನ್ನ ಮರ್ಯಾದೆ ತೆಗೆಯುತ್ತೇನೆ ಎಂದು ನನಗೆ ಹೇಳಿಲ್ಲ. 1ನೇ ಆರೋಪಿಯು ನನ್ನ ಖಾಸಗಿ ವೀಡಿಯೋಗಳನ್ನು ಆತನ ಸ್ನೇಹಿತರಿಗೆ ಕಳುಹಿಸಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ವಿಚಾರವಾಗಿ ಆರೋಪಿತರ ವಿರುದ್ಧ ನಾನು ಪೊಲೀಸರಿಗೆ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ.

3. ಈಗ ನೋಡುತ್ತಿರುವ ಒಂದು ದಾಖಲೆಯಲ್ಲಿ ನನ್ನ ಸಹಿ ಇದ್ದು, ಅದು ಒಂದು ದೂರಾಗಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದ್ದು, ಅದು ಕೃತ್ಯ ಸ್ಥಳದ ಮಹಜರ್ ಕ್ರಮವಾಗಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ನಿಪಿ-1 ಹಾಗೂ 2 ರ ದಾಖಲೆಗಳಲ್ಲಿನ ಸಹಿಗಳನ್ನು ನಾನು ಸುಮಾರು 2 ವರ್ಷದ ಹಿಂದೆ ಹಾಸನದ ಮಹಿಳಾ ಪೊಲೀಸ್ ಠಾಣೆಗೆ ನನ್ನ ವೈಯಕ್ತಿಕ ಕೆಲಸಕ್ಕೆಂದು ಹೋಗಿದ್ದಾಗ, 2 ದಾಖಲೆಗಳ ಮೇಲೆ ಸಹಿ ಮಾಡಲು ಕೇಳಿಕೊಂಡ ಮೇರೆಗೆ ನನ್ನ ಸಹಿಗಳನ್ನು ಮಾಡಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ನಾನು ತೋರಿಸಿದ ಯಾವುದೇ ಕೃತ್ಯ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿಲ್ಲ, ನಿಪಿ-1 ಹಾಗೂ 2 ರ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

4. ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಕಂಡು ಬಂದಿದ್ದು, ಸದರಿ ದಾಖಲೆಯು ವೈದ್ಯಕೀಯ ಪರೀಕ್ಷೆಗೆ ನೀಡಿದ ಅನುಮತಿ ಪತ್ರವಾಗಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3ಎ ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಕಂಡು ಬಂದಿದ್ದು, ಸದರಿ ದಾಖಲೆಯು ಮೊಬೈಲ್ ಅಮಾನತು ಮಹಜರ್ ಕ್ರಮವಾಗಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4ಎ ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಕಂಡು

ಬಂದಿದ್ದು, ಅದು ಅಧಿಕ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ಹಾಸನ ಇಲ್ಲಿ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ, ಕಲಂ 164 ರ ಅನ್ವಯ ನೀಡಿದಂತಹ ಹೇಳಿಕೆಯಾಗಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5ಎ ಎಂದು ಗುರುತಿಸಲಾಯಿತು.

5. ನನ್ನ ಹಾಗೂ ನನ್ನ ತಮ್ಮನ ಮೊಬೈಲ್ ಗಳನ್ನು ಪೊಲೀಸರು ತೆಗೆದುಕೊಂಡಿದ್ದು, ಯಾವ ಕಾರಣಕ್ಕಾಗಿ ತೆಗೆದುಕೊಂಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಅಮಾನತು ಮಹಜರ್ ಕ್ರಮ ಜರುಗಿಸಿಲ್ಲ.

(ಈ ಸಮಯದಲ್ಲಿ ಸೀಲುಮಾಡಲಾಗಿರುವ ಈ ಕೇಸಿನ 2 ಮುದ್ದೆಮಾಲುಗಳ ಪ್ರತ್ಯೇಕ ಗಂಟುಗಳನ್ನು, ಅವುಗಳ ಮೇಲಿರುವ ಸೀಲು ಸರಿ ಇದೆ ಎನ್ನುವುದನ್ನು ದೃಢಪಡಿಸಿಕೊಂಡು, ಎದುರುದಾರರ ವಕೀಲರ ಸಮಕ್ಷಮ ನ್ಯಾಯಾಲಯದ ಅನುಮತಿಯ ಮೇರೆಗೆ, ಬಿಚ್ಚಿ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ)

ಈಗ ನೋಡುತ್ತಿರುವ ಡಿ3 ಎಂದು ನಮುದಾಗಿರುವ ಮೊಬೈಲ್ ನನಗೆ ಸೇರಿದ್ದು ಹಾಗೂ ಡಿ4 ಎಂದು ನಮೂದಾಗಿರುವ ಮೊಬೈಲ್ ನನ್ನ ತಮ್ಮನದ್ದಾಗಿರುತ್ತದೆ. ಸದರಿ ವಸ್ತುಗಳನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಡಿ3 ಎಂದು ನಮೂದಾಗಿರುವ ಮೊಬೈಲನ್ನು ಎಂ.ಒ-1 ಎಂದು, ಡಿ4 ಎಂದು ನಮೂದಾಗಿರುವ ಮೊಬೈಲನ್ನು ಎಂ.ಒ-2 ಎಂದು ಗುರುತಿಸಲಾಯಿತು. ಘಟನೆ ಸಂಬಂಧ ನಾನು ಅಧಿಕ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ಹಾಸನ ಇಲ್ಲಿ ನಿಪಿ-5 ರಂತೆ ಒಂದು ಹೇಳಿಕೆಯನ್ನು ನೀಡಿದ್ದು, ಅದನ್ನು ಪೊಲೀಸರ ಕೋರಿಕೆ ಮೇರೆಗೆ ನೀಡಿರುತ್ತೇನೆ. ಪ್ರಕರಣ ಸಂಬಂಧ ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆಯನ್ನು ನೀಡಿರುವುದಿಲ್ಲ. ಈಗ ನೋಡುತ್ತಿರುವ 2 ಛಾಯಾಚಿತ್ರಗಳಲ್ಲಿ ನಾನು ಇರುವುದು ಕಂಡು ಬರುತ್ತದೆ. ಅವುಗಳನ್ನು ಸುಮಾರು 2 ವರ್ಷದ ಹಿಂದೆ ಪೊಲೀಸರು ನನ್ನನ್ನು ಒಂದು ಸ್ಥಳಕ್ಕೆ ಕರೆದುಕೊಂಡು ಹೋಗಿ ನಿಲ್ಲಿಸಿ ತೆಗೆಸಿದ್ದಾಗಿರುತ್ತದೆ. ಸದರಿ ಛಾಯಾಚಿತ್ರಗಳನ್ನು ಒಟ್ಟಾರೆ ನಿಪಿ-6 ಎಂದು ಗುರುತಿಸಲಾಯಿತು.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

**<u>ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

6. ದಿಃ 25.07.2023 ರಂದು ನಾನು ಕೊಟ್ಟಂತಹ ದೂರಿನಲ್ಲಿ 1ನೇ ಆರೋಪಿ ಜೀವನ್ ಈತನ ಪರಿಚಯ Instagram ಮೂಲಕ ಆಗಿದ್ದು, ಅತನು ನನ್ನ ಫೋನ್ ಗೆ ಮೆಸೇಜ್ ಮಾಡಿ ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ ಹಾಗೂ ನಿನ್ನನ್ನೇ ಮದುವೆಯಾಗುತ್ತೇನೆ ಎಂಬುದಾಗಿ ಹೇಳಿರುತ್ತಾನೆ ಎಂದು ಹೇಳಿರುತ್ತೇನೆ ಎಂದು ಸರಿಯಲ್ಲ.

ಈ ಸಮಯ ಊಟದ ಸಮಯವಾಗಿದ್ದರಿಂದ ಮುಂದುವರೆದ ಸಾಕ್ಷಿ ವಿಚಾರಣೆಯನ್ನು ಮದ್ಯಾಹ್ನದ ಅವಧಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ಇನ್ ಕ್ಯಾಮೆರಾದಲ್ಲಿ ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

**3**ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,

ಹಾಸನ.

**ಸಾಕ್ಷಿಯನ್ನು ಮದ್ಯಾಹ್ನ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

7. ದಿಃ 20.07.2023 ರಂದು 1ನೇ ಆರೋಪಿ ಜೀವನ್ ನನ್ನನ್ನು ಹಾಸನಕ್ಕೆ ಬಾ ಎಂದು ಕರೆದಾಗ, ಅದಕ್ಕೆ ನಾನು ಒಪ್ಪಿ ಹಾಸನಕ್ಕೆ ಬಂದಿದ್ದು, ಅದೇ ದಿನ ಮದ್ಯಾಹ್ನ 12.30 ಗಂಟೆ ಸಮಯಕ್ಕೆ 1ನೇ ಆರೋಪಿಯು ನಿನ್ನನ್ನು ನನ್ನ ತಂಗಿಯ ಜೊತೆ ಪರಿಚಯ ಮಾಡಿಕೊಡುತ್ತೇನೆಂದು, ಹಾಸನದ ವಿಜಯನಗರದ ಪಾರ್ಕ ಹತ್ತಿರ ಇರುವ 1ನೇ ಆರೋಪಿಯ ಸ್ನೇಹಿತನಾದ 2ನೇ ಆರೋಪಿಯ ಮನೆಗೆ ಕರೆದುಕೊಂಡು ಹೋದನು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಂತರ 1ನೇ ಆರೋಪಿಯು ನಾನು ನಿನ್ನನ್ನು ತುಂಬಾ ಪ್ರೀತಿಸುತ್ತಿದ್ದೆನೆ. ನಿನ್ನನ್ನೆ ಮದುವೆಯಾಗುತ್ತೇನೆ, ನಿನ್ನ ಕಂಡರೆ ನನಗೆ ತುಂಬಾ ಇಷ್ಟ ಹೇಗಿದ್ದರೂ ನಾವಿಬ್ಬರೂ ಮದುವೆಯಾಗುತ್ತೇವೆ, ಬಾ ಇಬ್ಬರು ಒಟ್ಟಿಗೆ ಮಲಗೋಣ ಎಂದು ಹೇಳಿದ. ನಾನು ಮದುವೆ ಆದ ನಂತರ ಇವೆಲ್ಲ ಇಟ್ಟುಕೊಳ್ಳೋಣ ಈ ವಿಚಾರ ನನ್ನ ತಂದೆ ತಾಯಿಗೆ ಗೊತ್ತಾದರೆ ಕಷ್ಟವಾಗುತ್ತದೆ ಎಂದು ಹೇಳಿದರೂ ಸಹ ಕೇಳದೆ ನನ್ನನ್ನ ಬಲವಂತವಾಗಿ ಮನೆಯ ರೂಮಿಗೆ ಎಳೆದುಕೊಂಡು ಹೋಗಿ ನಾನು ಎಷ್ಟು ಕೇಳಿಕೊಂಡರೂ ಕೇಳದೆ ನನ್ನ ಮೇಲೆ ಲೈಂಗಿಕ ಅತ್ಯಾಚಾರ ಮಾಡಿದನು. ನನಗೆ ಗೊತ್ತಿಲ್ಲದೆ ಈ ಲೈಂಗಿಕ ಅತ್ಯಾಚಾರ ಮಾಡಿದ ವಿಡಿಯೋ ಹಾಗೂ ಪೋಟೋಗಳನ್ನು ಆತನ ಸ್ನೇಹಿತ 2ನೇ ಆರೋಪಿಯ ಮೊಬೈಲ್ ಪೋನ್ ನಲ್ಲಿ ತೆಗೆದುಕೊಂಡು ಮದ್ಯಾಹ್ನ ಸುಮಾರು 12.50 ಗಂಟೆಗೆ ಹಾಸನದ ತಣ್ಣೀರುಹಳ್ಳದ ಸರ್ಕಲ್ ಹತ್ತಿರ ಕರೆದುಕೊಂಡು ಬಂದು ಬಿಟ್ಟನು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

8. ನಂತರ ನಾನು ನಮ್ಮ ಅಕ್ಕನ ಮನೆಯಾದ ಸಕಲೇಶಪುರ ತಾಲ್ಲೂಕು ಬಾಳೆಗದ್ದೆಗೆ ಹೋದೆ, ನಂತರ ಸಂಜೆ 1ನೇ ಆರೋಪಿ ನನಗೆ ಪೋನ್ ಮಾಡಿ ನಾನು ಅರ್ಜೆಂಟ್ ಆಗಿ ಪೋನ್ ತೆಗೆದುಕೊಳ್ಳಬೇಕು 5000/- ರೂ ಕಡಿಮೆ ಇದೆ ಹಣ ಹಾಕು ಎಂದು ಕೇಳಿದ ಅದಕ್ಕೆ ನಾನು ಹಣ ಇಲ್ಲ ಎಂದು ಹೇಳಿದೆ, ಅದಕ್ಕೆ 1ನೇ ಆರೋಪಿ ನೀನು ನನಗೆ ಹಣ ಹಾಕದಿದ್ದರೆ ನಾನು ಇವತ್ತು ನಿನ್ನ ಜೊತೆ ಇದ್ದ ಅಶ್ಲೀಲ ವಿಡಿಯೋ ಹಾಗು ಪೋಟೋಗಳನ್ನು ನಿನ್ನ ಸ್ನೇಹಿತರಿಗೆ ಕಳುಹಿಸಿ ನಿನ್ನ ಮಾನ ಮರ್ಯಾದೆ ತೆಗೆಯುತ್ತೇನೆಂದು ಹೆದರಿಸಿದನು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ಹೆದರಿ 5000/- ರೂಗಳನ್ನು ಆತನ ಅಕೌಂಟ್ ಗೆ ಹಾಕಿರುತ್ತೇನೆ. ನಂತರ 1ನೇ

ಆರೋಪಿ ನನಗೆ ಫೋನ್ ಮಾಡಿ ಇನ್ನೂ ಹೆಚ್ಚಿಗೆ ಹತ್ತು ಸಾವಿರ ಹಣ ಹಾಕು ಎಂದು ಕೇಳಿದನು. ನಾನು ನನ್ನ ಹತ್ತಿರ ಹಣ ಇಲ್ಲ ಎಂದು ಹೇಳಿದಕ್ಕೆ ನಿನ್ನ ಮಾನ ತೆಗೆಯುತ್ತೇನೆಂದು 1ನೇ ಆರೋಪಿ ಹೇಳಿದನು. ನನಗೆ ಗೊತ್ತಿರುವ ಹುಡುಗ ಗುರುಕಿರಣ್ ರವರಿಗೆ ಹಾಗೂ ಆತನ ಸ್ನೇಹಿತರಿಗೆ ಹಾಗೂ ನನ್ನ ಸ್ನೇಹಿತರಿಗೆ ನಾನು ಹಾಗು 1ನೇ ಆರೋಪಿ ಜೊತೆಗೆ ಇದ್ದ ವಿಡಿಯೋ ಹಾಗೂ ಪೋಟೋಗಳನ್ನು ಕಳುಹಿಸಿರುತ್ತಾನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರವನ್ನು ನಾನು ಚಾಸಾ-2 ಹಾಗೂ 3 ರವರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

9. ನನ್ನನ್ನು 1ನೇ ಅರೋಪಿ ಕರೆದುಕೊಂಡು ಹೋಗಿ ಬಲವಂತವಾಗಿ ಅತ್ಯಾಚಾರ ಮಾಡಿ ಈ ವಿಡಿಯೋಗಳನ್ನು ಆತನ ಸ್ನೇಹಿತ 2ನೇ ಆರೋಪಿ ದಿನೇಶ್ ರವರ ಮೊಬೈಲ್ ನಲ್ಲಿ ನನಗೆ ಗೊತ್ತಿಲ್ಲದ ಹಾಗೆ 1ನೇ ಆರೋಪಿ ಅಶ್ಲೀಲ ವಿಡಿಯೋವನ್ನು ಚಿತ್ರೀಕರಿಸಿಕೊಂಡಿದ್ದು, ಚಿತ್ರೀಕರಿಸಿಕೊಂಡ ಅಶ್ಲೀಲ ವಿಡಿಯೋವನ್ನು 2ನೇ ಅರೋಪಿ ದಿನೇಶ್ ನು ಆತನ ಸ್ನೇಹಿತ 1ನೇ ಆರೋಪಿಯ ಮೊಬೈಲ್ ಗೆ ಕಳುಹಿಸಿರುತ್ತಾನೆ ಎಂದು, ಮತ್ತು 1ನೇ ಆರೋಪಿಯು ಅಶ್ಲೀಲ ವಿಡಿಯೋವನ್ನು ಇಟ್ಟುಕೊಂಡು ಹಣ ಕೊಡುವಂತೆ ಬೆದರಿಕೆ ಹಾಕಿ, ಇಲ್ಲದಿದ್ದರೆ ಸಾಮಾಜಿಕ ಜಾಲತಾಣಗಳಲ್ಲಿ ಹಾಕುವುದಾಗಿ ಹೆದರಿಸಿ, ನಂತರ ಈ ವಿಡಿಯೋಗಳನ್ನು ಆತನ ಸ್ನೇಹಿತರಿಗೆ ಮತ್ತು ನನ್ನ ಸ್ನೇಹಿತರಿಗೆ ಕಳುಹಿಸಿದ ಆರೋಪಿತರ ವಿರುದ್ಧ ಕಾನೂನು ರೀತ್ಯ ಕ್ರಮ ಕೈಗೊಳ್ಳಬೇಕೆಂದು ಕೋರಿ ನಿಪಿ-1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ದೂರು ನೀಡಿದ ನಂತರ ಪೊಲೀಸರು ಅದೇ ದಿನ ನನ್ನನ್ನು ವೈದ್ಯಕೀಯ ಪರೀಕ್ಷೆಗಾಗಿ ಹಾಸನದ ಹಿಮ್ಸ್ ಆಸ್ಪತ್ರೆಗೆ ನನ್ನ ತಾಯಿಯ ಜೊತೆ ಕರೆದುಕೊಂಡು ಹೋಗಿದ್ದು, ನಿಪಿ-3 ರಂತೆ ನನ್ನ ವೈದ್ಯಕೀಯ ಪರೀಕ್ಷೆಗೆ ಒಪ್ಪಿ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

10. ದಿಃ 26.07.2023 ಪೊಲೀಸರಿಗೆ ನಾನು 1ನೇ ಅರೋಪಿಯು ನನ್ನ ಮೇಲೆ ಬಲವಂತವಾಗಿ ಅತ್ಯಾಚಾರ ಮಾಡಿದ ಸ್ಥಳ ಹಾಗೂ ಅದನ್ನು ಮೊಬೈಲ್ ನಲ್ಲಿ ಚಿತ್ರೀಕರಿಸಿದ ಸ್ಥಳ ಇದೆ ಎಂದು ತೋರಿಸಿದ ಮೇರೆಗೆ ಪೊಲೀಸರು ನಿಪಿ-2 ರಂತೆ ಮಹಜರ್ ಕ್ರಮವನ್ನು ಜರುಗಿಸಿ, ಅದೇ ಸ್ಥಳದಲ್ಲಿ ನಿಪಿ-6 ರಂತೆ 2 ಛಾಯಾಚಿತ್ರಗಳನ್ನು ತೆಗೆಸಿ ನಿಪಿ-2 ರ ದಾಖಲೆಯನ್ನು ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 05.08.2023 ರಂದು ನಾನು

ಪೊಲೀಸ್ ಠಾಣೆಗೆ ಹಾಜರಾಗಿ, 1ನೇ ಆರೋಪಿಯು ನನ್ನ ಹಾಗೂ ನನ್ನ ತಮ್ಮನ ಮೊಬೈಲ್ ಗೆ ನನ್ನ ಹಾಗೂ 1ನೇ ಆರೋಪಿಯ ಅಶ್ಲೀಲ ವೀಡಿಯೋಗಳನ್ನು ಕಳುಹಿಸಿದ ಬಗ್ಗೆ ನಾನು ಎಂ.ಓ-1 ಹಾಗೂ 2 ರ ಮೊಬೈಲ್ ಗಳನ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ಸದರಿ ವಸ್ತುಗಳನ್ನು ನಿಪಿ-4 ರಂತೆ ಮಹಜರ್ ಕ್ರಮ ಜರುಗಿಸಿ ನನ್ನ ಸಮಕ್ಷಮ ಅಮಾನತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-4 ರ ದಾಖಲೆಯಲ್ಲಿನ ವಿಚಾರಗಳನ್ನು ತಿಳಿದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

11. ನಂತರ ದಿಃ 07.08.2023 ರಂದು ಅಧಿಕ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ಹಾಸನ ಇಲ್ಲಿ ಘಟನೆಯ ಸಂಪೂರ್ಣ ವಿವರದ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನ್ಯಾಯಾಧೀಶರು ನಿಪಿ-5 ರಂತೆ ನನ್ನ ಹೇಳಿಕೆಗಳನ್ನು ದಾಖಲಿಸಿ, ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿಃ 20.08.2023 ರಂದು ನಾನು ಪೊಲೀಸರಿಗೆ ನೀಡಿದಂತಹ ಮುಂದುವರೆದ ಹೇಳಿಕೆಯಲ್ಲಿ "ನಾನು ಮೇಲೆ ತಿಳಿಸಿರುವ ವಿಳಾಸದಲ್ಲಿ ವಾಸವಾಗಿರುತ್ತೇನೆ ------------------------------------

-----------------------------------------------------------------------------

-----------------------------------------------------------------------------

---------------------------- ಈ ಬಗ್ಗೆ ಠಾಣೆಗೆ ಹಾಜರಾಗಿ ಮುಂದುವರೆದು ನನ್ನ ಮರು ಹೇಳಿಕೆಯನ್ನು ನೀಡಿರುತ್ತೇನೆ”. ಸದರಿ ಹೇಳಿಕೆಯನ್ನು ಸಾಕ್ಷಿಗೆ ಓದಿ ಹೇಳಲಾಗಿ, ಸಾಕ್ಷಿಯು ಅವುಗಳನ್ನು ಅಲ್ಲಗಳೆದಿರುವುದರಿಂದ, ಸದರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

12. ನಾನು ಆರೋಪಿಗಳ ವಿರುದ್ಧ ನಿಪಿ-1 ರಂತೆ ದೂರು, ನಿಪಿ-5 ರಂತೆ ನ್ಯಾಯಾಧೀಶರ ಮುಂದೆ ಹೇಳಿಕೆ ಹಾಗೂ ನಿಪಿ-7 ರಂತೆ ಮರು ಹೇಳಿಕೆ ನೀಡಿದ್ದರೂ ಸಹ ಹಾಗೂ ನಿಪಿ-2 ಮತ್ತು 4 ರ ದಾಖಲೆಗಳನ್ನು ಓದಿ, ತಿಳಿದುಕೊಂಡು ಸಹಿ ಮಾಡಿದ್ದರೂ ಸಹ ಆರೋಪಿತರಿಗೆ ಶಿಕ್ಷೆಯಾಗುವುದನ್ನು ತಪ್ಪಿಸಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ವಿ.ಎಂ ವಕೀಲರಿಂದಃ</u>**

ಆರೋಪಿತರ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ಇನ್ ಕ್ಯಾಮೆರಾದಲ್ಲಿ ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,

ಹಾಸನ.